ಸಿ.ಸಿ .ನಂ.225/2022                                    ಪಿಡಬ್ಲೂಃ 1

ದಿನಾಂಕಃ 23-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎಮ್ ವಕೀಲರಿಂದಃ**

3. ನಾನು ಫಿರ್ಯಾದು ಸಂಸ್ಥೆಯಲ್ಲಿ ಕಳೆದ ಒಂದುವರೆ ತಿಂಗಳಿನಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ . ಈ ಪ್ರಕರಣದ ಸಾಲಗಾರ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿದಾಗ ನಾನು ಫಿರ್ಯಾದು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ . ಸಾಲ ಪಡೆಯುವಾಗ ಸಾಲಗಾರರಿಂದ ಹಿಂದಿನ ಮ್ಯಾನೇಜರ್ ಗೆ ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದಾರೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದರು ಎಂದು ಹೇಳಲು ಸಾಧ್ಯವಿಲ್ಲ ಹಿಂದಿನ ಮ್ಯಾನೇಜರ್ ಸೂಕ್ತ ವ್ಯಕ್ತಿ ಎಂದರೆ ಸರಿಯಲ್ಲ. ಸಾಲಗಾರ ಅರ್ಜಿಯನ್ನು ಸಲ್ಲಿಸಿದಾಗ ಶಾಖಾ ವ್ಯವಸ್ಥಾಪಕರು ಯಾರು ಆಗಿದ್ದರು ಗೊತ್ತಿಲ್ಲ.

4. ನಮ್ಮ ಸಂಸ್ಥೆಯಲ್ಲಿ ಯಾರಾದರೂ ಸಾಲವನ್ನು ಪಡೆಯಬೇಕಾದರೆ ಅವರು ನಮ್ಮ ಸಂಸ್ಥೆಯ ಸದಸ್ಯತ್ವವನ್ನು ಹೊಂದಿರಬೇಕು ಎಂದರೆ ಸರಿ . ಈ ಕೇಸಿನ ಸಾಲಗಾರ 2020 ರಲ್ಲಿ ಸದಸ್ಯತ್ವ ಪಡೆದಿದ್ದರು. ಸದಸ್ಯತ್ವವನ್ನು ಹೊಂದದೇ ಇದ್ದರೆ ಅಂತಹ ಸದಸ್ಯರಿಗೆ ಸಾಲವನ್ನು ಕೊಡಲು ಬರುವುದಿಲ್ಲ ಎಂದರೆ ಸರಿ . ಈ ಕೇಸಿನ ಸಾಲಗಾರ ಯಾವ ರೀತಿಯ ಸದಸ್ಯತ್ವ ಹೊಂದಿದ್ದರು ನೆನಪಿಲ್ಲ . ಹಾಜರು ಪಡಿಸಿದ ದಾಖಲಾತಿಗಳನ್ನು ನೋಡಿದರೆ ಯಾವ ಸದಸ್ಯತ್ವ ಹೊಂದಿದ್ದರು ಎಂದು ಗೊತ್ತಾಗುತ್ತದೆ ಎಂದರೆ ಸರಿ . ಸಾಕ್ಷಿ ಕೇಸಿನ ಕಡತದಲ್ಲಿರುವ ದಾಖಲಾತಿಗಳನ್ನು ನೋಡಿ ನಮೂದು ಇಲ್ಲ ಎಂದು ನುಡಿದಿರುತ್ತಾರೆ . ಯಾವ ರೀತಿಯ ಸದಸ್ಯತ್ವ ಹೊಂದಿದ್ದರು ನನಗೆ ಗೊತ್ತಿಲ್ಲ ಎಂದರೆ ಸರಿ . ಯಾವ ಯಾವ ರೀತಿಯ ಸದಸ್ಯತ್ವ ಹೊಂದಿದವರಿಗೆ ಸಾಲವನ್ನು ನೀಡುತ್ತಾರೆ ಗೊತ್ತಿಲ್ಲ . ಷೇರು ಸದಸ್ಯತ್ವ ಹೊಂದಿದವರಿಗೆ ಮಾತ್ರ ಸಾಲವನ್ನು ನಿಗದಿ ಮಾಡಬೇಕೆಂದು ಇದೆ ಎಂದರೆ ಸರಿ .

ಪಿಡಬ್ಲೂಃ 1

5. ಒಂದು ಸಾಲದ ಅರ್ಜಿಯನ್ನು ಸಂಸ್ಥೆಗೆ ನೀಡಿದ ನಂತರ ಅದನ್ನು ಆಡಳಿತ ಮಂಡಳಿಯಲ್ಲಿ ಇಟ್ಟು ಮಂಜೂರು ಮಾಡಿಸಬೇಕು ಎಂದರೆ ಸರಿ . ಈ ಕೇಸಿನ ಸಾಲದ ಅರ್ಜಿಯನ್ನು ಕೂಡ ಆಡಳಿತ ಮಂಡಳಿಯ ಮುಂದೆ ಇಟ್ಟಿದ್ದೆವು . 90 ಸಾವಿರ ರೂ. ಸಾಲವನ್ನು ಕೇಳಿ ಅರ್ಜಿಯನ್ನು ಸಲ್ಲಿಸಿದ್ದರು. ಸಾಲದ ಅರ್ಜಿ ಸಲ್ಲಿಸಿದ ನಂತರ ಆಡಳಿತ ಮಂಡಳಿಯವರು ಅರ್ಜಿಯನ್ನು ಮಂಜೂರು ಮಾಡಬಹುದು ಅಥವಾ ತಿರಸ್ಕತಗೊಳಿಸಬಹುದು ಎಂದರೆ ಸರಿ . ಸಾಲಗಾರ ಸಾಲವನ್ನು ಪಡೆದುಕೊಂಡ ನಂತರ ಒಂದು ಕಂತು ಕಟ್ ಬಾಕಿಯಾದರೂ ನೋಟಿಸನ್ನು ಕೊಡುತ್ತೇವೆ . ನಮ್ಮ ಬ್ಯಾಂಕಿನವರ ಮೂಲಕ ಕೂಡ ನೋಟಿಸನ್ನು ಕೊಡುತ್ತೇವೆ . ಈ ಪ್ರಕರಣದಲ್ಲಿ ಸಾಲ ಕಟ್ ಬಾಕಿಯಾದ ಬಗ್ಗೆ ಬ್ಯಾಂಕಿನ ಮೂಲಕ ನೋಟಿಸನ್ನು ಕೊಟ್ಟಿದ್ದೇವೆ . ಪೋಸ್ಟ ಮೂಲಕ ನೋಟಿಸನ್ನು ಕಳುಹಿಸಿದ್ದೇವೆ . ಆ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೋ ಇಲ್ಲವೋ ದಾಖಲಾತಿ ನೋಡಿ ಹೇಳಬೇಕು . ಸಾಕ್ಷಿ ಕೇಸಿನ ಕಡತದಲ್ಲಿರುವ ದಾಖಲಾತಿಯನ್ನು ನೋಡಿ ನೋಟಿಸನ್ನು ಹಾಜರು ಪಡಿಸಿಲ್ಲ ಎಂದು ನುಡಿದಿರುತ್ತಾರೆ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಈ ಪ್ರಕರಣದಲ್ಲಿ ಸಾಲಗಾರ ಎಷ್ಟು ಕಂತುಗಳನ್ನು ಕಟ್ ಬಾಕಿ ಮಾಡಿದ್ದಾರೆ ನೆನಪಿಲ್ಲ. ನಾವು ಬ್ಯಾಂಕ್ ಮೂಲಕ ಯಾವುದೇ ನೋಟಿಸನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ನೋಟಿಸು ಸಾಲಗಾರನಿಗೆ ತಲುಪಿಲ್ಲ ನೋಟಿಸು ಕಳುಹಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.